RNU AIR DHARWAD

APRIL 24, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಪಹಲ್ಗಾಮ್ ಭಯೋತ್ಪಾದನಾ ದಾಳಿ; ರಾಜ್ಯದ ಪ್ರವಾಸಿಗರಿಗೆ, ಎಲ್ಲ ರೀತಿಯ ನೆರವು – ಮುಖ್ಯಮಂತ್ರಿ ಸಿದ್ದರಾಮಯ್ಯ.**
- **ಪ್ರಧಾನಮಂತ್ರಿ ಸೌರ ವಿದ್ಯುತ್, ಕುಸುಮ ಯೋಜನೆ; ವಿಜಯಪುರ ಜಿಲ್ಲೆಯಾದ್ಯಂತ, ಯಶಸ್ವಿ ಅನುಷ್ಠಾನ.**
- **ವಿಜಯನಗರ ಜಿಲ್ಲೆ, ತುಂಗಭದ್ರಾ ಹಿನ್ನೀರಿನಲ್ಲಿ, ಅಳಿವಿನಂಚಿನ ವಲಸೆ ಹಕ್ಕಿ, ವೈಟ್ ವಿಂಗ್ಡ್ ಟೆರ್ನ್, ಪ್ರಥಮ ಬಾರಿಗೆ ಗೋಚರ.**
- **ಇಂದು, ರಾಷ್ಟ್ರೀಯ ಪಂಚಾಯತ್ ರಾಜ್ ದಿನಾಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಜಮ್ಮು–ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ, ಭಯೋತ್ಪಾದನಾ ದಾಳಿಯಲ್ಲಿ, ಶಿವಮೊಗ್ಗದ ಮಂಜುನಾಥ ರಾವ್ ಹಾಗೂ ಬೆಂಗಳೂರಿನ ಭರತ್ ಭೂ 'ಣ್ ಮತ್ತು ಮಧುಸೂಧನ ಸೋಮಿಶೆಟ್ಟಿ ಹತರಾಗಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಮಂಜುನಾಥ್ ರಾವ್ ಅವರ ಪತ್ನಿ ಪಲ್ಲವಿ ಹಾಗೂ ಬೆಂಗಳೂರಿನ ಮತ್ತಿಕೆರೆಯ ಭರತ್ ಭೂ 'ಣ್ ಅವರ ಪತ್ನಿ ಸುಜಾತ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿ, ಧೈರ್ಯ ತುಂಬಿದ್ದಾರೆ. ಮೂವರು ಮೃತರ ಕುಟುಂಬಗಳಿಗೆ, ತಲಾ 10 ಲಕ್ಷ ರೂಪಾಯಿ ಪರಿಹಾರ ಪ್ರಕಟಿಸಿದ್ದಾರೆ.**

<><><>

**ಚಾಮರಾಜ ನಗರದ ಮಲೈ ಮಹದೇಶ್ವರ ಬೆಟ್ಟದಲ್ಲಿ ಇಂದು ಆಯೋಜಿತ, ಸಚಿವ ಸಂಪುಟ ಸಭೆಯಲ್ಲಿ, ಮುಖ್ಯಮಂತ್ರಿ ಅಧ್ಯಕ್ಷತೆ ವಹಿಸಲಿದ್ದಾರೆ.**

<><><>

**ಈ ಮಧ್ಯೆ, ಶ್ರೀನಗರ ಪ್ರವಾಸ ಕೈಗೊಂಡಿರುವ, ಕೊಪ್ಪಳದ ನಾಲ್ಕು ಕುಟುಂಬಗಳ ಸದಸ್ಯರು, ಚಿಕ್ಕಮಗಳೂರಿನ ಒಂದೇ ಕುಟುಂಬದ ಐವರು ಸುರಕ್ಷಿತವಾಗಿದ್ದಾರೆ.**

<><><>

ಸಚಿವ ಸಂತೋ ಷ್ ಲಾಡ್ ಭೇಟಿ ಮಾಡಿ, ಮರು ಪ್ರಯಾಣದ ವ್ಯವಸ್ಥೆ ಸೇರಿದಂತೆ, ಎಲ್ಲ ವ್ಯವಸ್ಥೆ ಮಾಡುವ ಭರವಸೆ ನೀಡಿದ್ದಾರೆ. ರಾಜ್ಯದ 150ಕ್ಕೂ ಹೆಚ್ಚು ಜನರನ್ನು ಇಂದು ಸುರಕ್ಷಿತವಾಗಿ ಮರಳಿ ಕರೆ ತರಲು, ವ್ಯವಸ್ಥೆ ಮಾಡಲಾಗಿದೆ. ಕಲಬುರಗಿ, ರಾಯಚೂರು, ಹಾವೇರಿ ಹಾಗೂ ಉಡುಪಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ, ಸಹಾಯವಾಣಿ ಆರಂಭಿಸಲಾಗಿದೆ.

<><><>

ಕಾಶ್ಮೀರದ ಪಹಲ್ಗಾಮ್ ನಿಂದ, ಪ್ರವಾಸಿಗರನ್ನು ಸುರಕ್ಷಿತ ಸ್ಥಳಕ್ಕೆ ರವಾನಿಸಲು, ವೈಮಾನಿಕ ಕಂಪೆನಿಗಳು, ವಿಮಾನ ಟಿಕೆಟ್ ದರ ಹೆಚ್ಚಿಸದಂತೆ, ಸೂಚಿಸಲಾಗಿದೆ ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಹೊಸ ದಿಲ್ಲಿಯಲ್ಲಿ ಹೇಳಿದ್ದಾರೆ. ಇಂದು ಅವರು, ಶಿವಮೊಗ್ಗಕ್ಕೆ ತೆರಳಿ, ಮಂಜುನಾಥರಾವ್ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿ, ಕುಟುಂಬದವರಿಗೆ ಸಾಂತ್ವನ ಹೇಳುವುದಾಗಿ, ಬೆಂಗಳೂರಿನಲ್ಲಿ ತಡರಾತ್ರಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

<><><>

ಧಾರವಾಡದ, ಕಾರ್ಗಿಲ್ ವಿಜಯ ಸ್ಮಾರಕ ಸಮಿತಿ, ಜಿಲ್ಲಾಧಿಕಾರಿ ಕಚೇರಿ ಆವರಣದ, ಕಾರ್ಗಿಲ್ ಸ್ಥೂಪದಲ್ಲಿ, ಉಗ್ರರ ಹೇಯ ಕೃತ್ಯವನ್ನು ಖಂಡಿಸಿ, ಶ್ರದ್ಧಾಂಜಲಿ ಸಲ್ಲಿಸಿತು.

<><><>

ಪ್ರಧಾನಮಂತ್ರಿ ಸೌರ ವಿದ್ಯುತ್, ಕುಸುಮ ಬಿ ಮತ್ತು ಸಿ ಯೋಜನೆಗಳನ್ನು, ವಿಜಯಪುರ ಜಿಲ್ಲೆಯಾದ್ಯಂತ, ಆದ್ಯತೆಯ ಮೇಲೆ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಯೋಗದಲ್ಲಿ, ಅನುಷ್ಠಾನಗೊಳಿಸಲಾಗುತ್ತಿದೆ. ಇಡೀ ರಾಜ್ಯದಲ್ಲಿಯೇ, ಮೊಟ್ಟ ಮೊದಲ ಬಾರಿಗೆ, ಪ್ರಧಾನಮಂತ್ರಿ ಕುಸುಮ ಸಿ ಯೋಜನೆಯಡಿ, ರೈತರ ಪಂಪ್‌ಸೆಟ್‌ಗಳಿಗೆ, ನಿರಂತರವಾಗಿ ಏಳು ಗಂಟೆಗಳ ಕಾಲ, ಸೌರ ವಿದ್ಯುತ್ ಪೂರೈಸಲಾಗುತ್ತಿದೆ ಎಂದು, ವಿಜಯಪುರ ಹೆಸ್ಕಾಂ ಅಧೀಕ್ಷಕ ಅಭಿಯಂತರ, ತಿಳಿಸಿದ್ದಾರೆ. ಪ್ರಧಾನಮಂತ್ರಿ ಕುಸುಮ ಬಿ ಯೋಜನೆಯಡಿ, 164 ನೀರಾವರಿ ಪಂಪ್ ಸೆಟ್‌ಗಳ ಪೈಕಿ, 27 ನೀರಾವರಿ ಪಂಪ್ ಸೆಟ್‌ಗಳಿಗೆ, ಸೌರಶಕ್ತಿ ಚಾಲಿತ, ಪಂಪ್ ಸೆಟ್‌ಗಳನ್ನು ಅಳವಡಿಸಲಾಗಿದೆ. ಸೌರಮಿತ್ರ ಪೋರ್ಟಲ್ ಮೂಲಕ, 2 ಸಾವಿರದ 2 ನೂರ 95 ರೈತರು, ಸೋಲಾರ್ ಪಂಪಸೆಟ್ ಅಳವಡಿಸಿಕೊಳ್ಳಲು, ಹೆಸರು ನೊಂದಾಯಿಸಿದ್ದಾರೆ.

<><><>

ಶಿವಮೊಗ್ಗ ಕೃಷಿ ವಿಜ್ಞಾನ ಕೇಂದ್ರದ, ರಜತ ಮಹೋತ್ಸವದ ಅಂಗವಾಗಿ, ನವಿಲೆ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ, ನಾಡಿದ್ದು 26 ರಿಂದ 28ರ ವರೆಗೆ, ವೈವಿಧ್ಯಮಯ ಹಣ್ಣುಗಳ ಮೇಳ ಆಯೋಜಿಸಲಾಗಿದೆ ಎಂದು, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಉಪ ಕುಲಪತಿ ಆರ್.ಸಿ.ಜಗದೀಶ ತಿಳಿಸಿದ್ದಾರೆ. ಮೂರು ದಿನಗಳ ಕಾಲ, ಬೆಳಗ್ಗೆ 9 ರಿಂದ ರಾತ್ರಿ 9ರ ವರೆಗೆ ಈ ಮೇಳ ಜರುಗಲಿದೆ. ವೈವಿಧ್ಯಮಯ ಮಾವಿನ ಹಣ್ಣುಗಳು, ಹಲಸು, ಬಾಳೆ ಹಾಗೂ ವಿವಿಧ ಜಾತಿಯ 800 ಹಣ್ಣುಗಳ ಪ್ರದರ್ಶನ ಮತ್ತು ಮಾರಾಟ ಏರ್ಪಡಿಸಲಾಗಿದೆ. ಮಲೆನಾಡಿನ ವಿಶಿ ಷ್ಟ ಖಾದ್ಯಗಳು, 8 ಲಕ್ಷ ಸಸಿಗಳು ರಿಯಾಯ್ತಿ ದರದಲ್ಲಿ ಮಾರಾಟಕ್ಕೆ ಲಭ್ಯವಿರಲಿವೆ. 150 ಮಳಿಗೆಗಳನ್ನು ಸ್ಥಾಪಿಸಲಾಗುತ್ತಿದೆ ಎಂದರು. ತಾಂತ್ರಿಕ ಸಮಾವೇಶಗಳು, ವಿದ್ಯಾರ್ಥಿಗಳಿಗೆ ಸ್ಪರ್ಧೆಗಳು ಹಾಗೂ ಪಾಕ ಸ್ಪರ್ಧೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಹ ಆಯೋಜಿಸಲಾಗಿದೆ ಎಂದು, ಮಾಹಿತಿ ನೀಡಿದರು.

<><><>

ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ರಾಜ್ಯ ಸಚಿವ, ಡಾಕ್ಟರ್ ಜಿತೇಂದ್ರ ಸಿಂಗ್, ಇಂದು ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ, ಗಾಂಧಿ ಕೃಷಿ ವಿಜ್ಞಾನ ಕೇಂದ್ರದ, ಬ್ರಿಮ್‌ಸ್ಟೆಕ್ ಕೇಂದ್ರಕ್ಕೆ ಭೇಟಿ ನಿಡಲಿದ್ದಾರೆ.

<><><>

'ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ, ಸಾಹಿತ್ಯದ ಪಾತ್ರ' ಎಂಬ ಧ್ಯೇಯದೊಂದಿಗೆ, ವಿಶ್ವ ಪುಸ್ತಕ ದಿನವನ್ನು, ವಿವಿಧೆಡೆ ಅರ್ಥಪೂರ್ಣವಾಗಿ, ಆಚರಿಸಲಾಯಿತು.

<><><>

ಬೆಂಗಳೂರಿನ ಮಲ್ಲತ್ತಹಳ್ಳಿಯ, ಸಾಹಿತ್ಯ ಅಕಾದೆಮಿ ಸಭಾಂಗಣದಲ್ಲಿ, ಸಾಹಿತಿ ಆರ್.ಲಕ್ಷ್ಮೀನಾರಾಯಣ ಹಾಗೂ ಎಚ್.ಎಸ್.ಎಂ. ಪ್ರಕಾಶ್ ಅವರ ಪುಸ್ತಕಗಳ ಕುರಿತು, ಸಂವಾದ ಕಾರ್ಯಕ್ರಮ, ಜರುಗಿತು.

<><><>

ಮಲ್ಟಿ ಮೀಡಿಯಾ ಹಾಗೂ ಮಾಹಿತಿ ತಂತ್ರಜ್ಞಾನ ಬಲದಿಂದ, ಜ್ಞಾನದ ಆಕರಗಳು, ಏಕ ಕೇಂದ್ರಾಗ್ರ ಮುಖತೆಯತ್ತ ಹೊರಳಿವೆ. ಈ ಕುರಿತು, ಹುಬ್ಬಳ್ಳಿಯ, ನವನಗರದ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ – ಟ್ರಿಪಲ್ ಐಟಿ ನಿರ್ದೇಶಕ ಎಸ್.ಆರ್. ಮಹದೇವ ಪ್ರಸನ್ನ, ಪುಸ್ತಕ ದಿನದ ಪ್ರಸ್ತುತತೆ ಕುರಿತು, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಟ್ರಿಪಲ್ ಐಟಿ ನಿರ್ದೇಶಕ ಮಹದೇವ ಪ್ರಸನ್ನ ಧ್ವನಿ 45 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ವಿಜಯನಗರ ಜಿಲ್ಲೆ, ಹಗರಿಬೊಮ್ಮನಹಳ್ಳಿ ತಾಲೂಕು, ನಾರಾಯಣದೇವರ ಕೆರೆ ಬಳಿ, ತುಂಗಭದ್ರಾ ಹಿನ್ನೀರಿನಲ್ಲಿ, ಅಪರೂಪದ ಮತ್ತು ಅಳಿವಿನಂಚಿನಲ್ಲಿರುವ ವೈಟ್ ವಿಂಗ್ಡ್ ಟೆರ್ನ್ – ಬಿಳಿ ರೆಕ್ಕೆಯ ನದಿರೀವ ಹಕ್ಕಿ ಪ್ರಥಮ ಬಾರಿಗೆ ಕಾಣಸಿಕ್ಕಿದೆ. ಯುರೋಪ್ ದೇಶದಿಂದ, ಚಳಿಗಾಲ ಕಳೆಯಲು ಹಾಗೂ ಆಹಾರ ಅರಸಿ, ವೈಟ್ ವಿಂಗ್ಡ್ ಟೆರ್ನ್, ಮೊದಲ ಬಾರಿಗೆ, ಕಳೆದ ವರ್ಷ ಶಿವಮೊಗ್ಗ ಜಿಲ್ಲೆ, ಭದ್ರಾ ನದಿ ಹಿನ್ನೀರಿನಲ್ಲಿ ಕಾಣಸಿಕ್ಕಿತ್ತು. ಎರಡನೇ ಬಾರಿ ಈ ವರ್ಷ ತುಂಗಭದ್ರಾ ಹಿನ್ನೀರಿನಲ್ಲಿ, ಕಾಣಸಿಕ್ಕ ಅಪರೂಪದ ವಿದ್ಯಮಾನದ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ, ವಿಜಯನಗರ ಜಿಲ್ಲೆ, ಹೊಸಪೇಟೆಯ ಪಕ್ಷಿ ಮಿತ್ರ, ಸಮದ್ ಕೊಟ್ಟೂರು.

<><><>

ಸಮದ್ ಕೊಟ್ಟೂರು ಧ್ವನಿ 50 ಸೆಕೆಂದುಗಳು

<><><>

ಇಂದು, ರಾಷ್ಟ್ರೀಯ ಪಂಚಾಯತ್ ರಾಜ್ ದಿನವನ್ನು, ಆಚರಿಸಲಾಗುತ್ತಿದೆ. ಭಾರತೀಯ ಸಂವಿಧಾನದ, 1992ರ 73ನೇ ತಿದ್ದುಪಡಿ ಅನ್ವಯ, ಪಂಚಾಯತ್‌ರಾಜ್ ಸಂಸ್ಥೆಗಳು ಹಾಗೂ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಿಗೆ, ಗ್ರಾಮೀಣ ಮಟ್ಟದಲ್ಲಿ, ಸ್ವಾಯತ್ತತೆ ಹಾಗೂ ಅಧಿಕಾರ ವಿಕೇಂದ್ರೀಕರಣ ಖಾತ್ರಿಪಡಿಸಿದ ಹೆಜ್ಜೆ. 1993ರ ಏಪ್ರಿಲ್ 24 ರಂದು,

ಪಂಚಾಯತ್‌ರಾಜ್ ಕಾಯ್ದೆ ಅನುಷ್ಠಾನಗೊಂಡು, ಗ್ರಾಮೀಣಾಭಿವೃದ್ಧಿಯಲ್ಲಿ, ವಿಶೇಷ ಶಕೆಯೊಂದನ್ನು ಆರಂಭಿಸಿತು. 2010ರಲ್ಲಿ ಪ್ರಥಮ ಬಾರಿಗೆ ಏಪ್ರಿಲ್ 24 ರಂದು ಪಂಚಾಯತ್‌ರಾಜ್ ದಿನ ಆಚರಿಸಲಾಯಿತು.

<><><>

ಕಾರವಾರದ, ರವೀಂದ್ರನಾಥ್ ಟ್ಯಾಗೋರ್ ಕಡಲ ತೀರದಲ್ಲಿ, ಮೇ 4 ರಿಂದ ಐದು ದಿನಗಳ ಕಾಲ ಅದ್ದೂರಿಯಾಗಿ, ಕರಾವಳಿ ಉತ್ಸವ ಆಯೋಜಿಸಲಾಗುವುದು ಎಂದು, ಶಾಸಕ ಸತೀಶ್ ಸೈಲ್ ತಿಳಿಸಿದ್ದಾರೆ. ಕಾರವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಕರಾವಳಿ ಉತ್ಸವದ, ಪೂರ್ವಭಾವಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮೇ 4 ರಂದು ಸಂಜೆ, ಕರಾವಳಿ ಉತ್ಸವವನ್ನು, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಸೇರಿದಂತೆ, ಗಣ್ಯರು ಉದ್ಘಾಟಿಸಲಿದ್ದಾರೆ. ಸಾಂಸ್ಕೃತಿಕ, ಸಂಗೀತ ಉತ್ಸವ ಹಾಗೂ ಅನೇಕ ಮನೋರಂಜನಾ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು, ಎಂದರು. ರಾಜ್ಯದಲ್ಲಿಯೇ ಮೊದಲ ಬಾರಿಗೆ ಎಲ್.ಇ.ಡಿ. ಗಾಳಿಪಟ ಪ್ರದರ್ಶನ ನಡೆಯಲಿದೆ. 15 ಕ್ಕೂ ಅಧಿಕ ಸಮಿತಿಗಳನ್ನು ರಚಿಸಲಾಗಿದೆ ಎಂದರು.

<><><>

ವರನಟ, ಗಾನ ಗಂಧರ್ವ, ರಾಜ್‌ಕುಮಾರ್, ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ ಮುತ್ತುರಾಜ್ ಅವರ 97ನೇ ಜನ್ಮ ದಿನ ಇಂದು. 1983 ರಲ್ಲಿ ಪದ್ಮಭೂಷಣ ಹಾಗೂ 1995 ರಲ್ಲಿ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಭೂಷಿತರಾದ ರಾಜ್‌ಕುಮಾರ್, ಕನ್ನಡ ಭಾಷೆಯಲ್ಲಿ ಮಾತ್ರ ರೂಪಿಸಿದ ಚಿತ್ರಗಳು, ಬಳಿಕ 9 ಭಾಷೆಗಳಲ್ಲಿ ರಿಮೇಕ್ ಆಗಿರುವುದು ದಾಖಲೆ. 2006ರ ಏಪ್ರಿಲ್ 12 ರಂದು ರಾಜ್‌ಕುಮಾರ್ ನಿಧನರಾದರು.

<><><>

ಖೇಲೋ ಇಂಡಿಯಾ, ರಾಜ್ಯ ಉತ್ಕೃಷ್ಟತಾ ಕೇಂದ್ರಕ್ಕೆ, ಪ್ರತಿಭಾನ್ವಿತ ಅಥ್ಲೆಟಿಕ್ಸ್ ಕ್ರೀಡಾಪಟುಗಳನ್ನು ಆಯ್ಕೆ ಮಾಡಲು, ಮೇ 5 ಹಾಗೂ 6 ರಂದು, ಬೆಂಗಳೂರಿನ ವಿದ್ಯಾನಗರದ, ಶ್ರೀ ಜಯಪ್ರಕಾಶ್ ನಾರಾಯಣ ರಾಷ್ಟ್ರೀಯ ಯುವ ತರಬೇತಿ ಕ್ರೀಡಾಶಾಲೆ ಕೇಂದ್ರದಲ್ಲಿ, ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಸಂಪರ್ಕಿಸಬಹುದು.

<><><>

ದ್ವಿತೀಯ ಪಿಯೂಸಿ 2ನೇ ವಾರ್ಷಿಕ ಪರೀಕ್ಷೆ, ರಾಜ್ಯಾದ್ಯಂತ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ, ಇಂದಿನಿಂದ ಆರಂಭವಾಗಲಿದ್ದು, ವ್ಯಾಪಕ ಪೂರ್ವ ಸಿದ್ಧತೆಗಳನ್ನು ಪದವಿಪೂರ್ವ ಶಿಕ್ಷಣ ಇಲಾಖೆ, ಕೈಗೊಂಡಿದೆ. ಬಿ.ಎಂ.ಟಿ.ಸಿ. ಬಸ್ಸುಗಳಲ್ಲಿ, ಪರೀಕ್ಷಾರ್ಥಿಗಳಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದೆ.

<><><>

ಉಪ ಲೋಕಾಯುಕ್ತ ಬಿ.ವೀರಪ್ಪ, ದಾವಣಗೆರೆಯಲ್ಲಿ, ನಾಲ್ಕು ದಿನಗಳ ಕಾಲ, ವಿವಿಧ ಸ್ಥಳಗಳಿಗೆ ಅನಿರೀಕ್ಷಿತ ಭೇಟಿ ನೀಡಿ, ಪರಿಶೀಲಿಸುವರು.

<><><>

ಯಾದಗಿರಿಯಲ್ಲಿ, ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ, ಬಿ.ಜೆ.ಪಿ. ಮುಖಂಡರು, ಜನಾಕ್ರೋಷ ಯಾತ್ರೆ ನಡೆಸಿದರು.

<><><>

ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲೂಕು ಮಾಲಗೊಂಡನಕೊಪ್ಪ ಮತ್ತು ಬಿಳಿಕಿ ಗ್ರಾಮದ 12 ಜನ ಕೃಷಿಕರಿಗೆ, ಕಳಪೆ ಭತ್ತದ ಬೀಜ ಪೂರೈಸಿದ ಕಂಪೆನಿಗೆ, ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ, ದಂಡ ವಿಧಿಸಿ, ಆದೇಶಿಸಿದೆ.

<><><>

ಚಿಕ್ಕಮಗಳೂರಿನ ಮೂಡಿಗೆರೆ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ, ರೈತರ ಮಕ್ಕಳಿಗಾಗಿ, 10 ತಿಂಗಳ ತರಬೇತಿಗಾಗಿ, ಅರ್ಜಿ ಆಹ್ವಾನಿಸಲಾಗಿದೆ.

<><><>

ಉಡುಪಿ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ, ಉಚಿತ ದರಖಾಸ್ತು ಪೋಡಿ ಆಂದೋಲನ ಆಯೋಜಿಸಲಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಪಹಲ್ಗಾಮ್ ಭಯೋತ್ಪಾದನಾ ದಾಳಿ; ರಾಜ್ಯದ ಪ್ರವಾಸಿಗರಿಗೆ, ಎಲ್ಲ ರೀತಿಯ ನೆರವು – ಮುಖ್ಯಮಂತ್ರಿ ಸಿದ್ದರಾಮಯ್ಯ.
- ಪ್ರಧಾನಮಂತ್ರಿ ಸೌರ ವಿದ್ಯುತ್, ಕುಸುಮ ಯೋಜನೆ: ವಿಜಯಪುರ ಜಿಲ್ಲೆಯಾದ್ಯಂತ, ಯಶಸ್ವಿ ಅನುಷ್ಠಾನ.
- ವಿಜಯನಗರ ಜಿಲ್ಲೆ, ತುಂಗಭದ್ರಾ ಹಿನ್ನೀರಿನಲ್ಲಿ, ಅಳಿವಿನಂಚಿನ ವಲಸೆ ಹಕ್ಕಿ, ವೈಟ್ ವಿಂಗ್ಡ್ ಟೆರ್ನ್, ಪ್ರಥಮ ಬಾರಿಗೆ ಗೋಚರ.
- ಇಂದು, ರಾಷ್ಟ್ರೀಯ ಪಂಚಾಯತ್ ರಾಜ್ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>